ಕರ್ನಾಟಕ ವಿಧಾನ ಪರಿಷತ್ತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 244
2. ಸದಸ್ಯರ ಹೆಸರು : ಮುನಿರಾಜುಗೌಡ ಪಿ.ಎಂ.
3. ಉತ್ತರಿಸುವ ದಿನಾಂಕ : 14.12.2021
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು (ಜಿಲ್ಲಾವಾರು ಕಾರ್ಖಾನೆಗಳ ಹೆಸರಿನೊಂದಿಗೆ ವಿವರ ನೀಡುವುದು)</td><td rowspan="2">ರಾಜ್ಯದಲ್ಲಿ ಒಟ್ಟು 88 ನೋಂದಾಯಿತ ಸಕ್ಕರೆ ಕಾರ್ಖಾನೆಗಳಿದ್ದು, ಇವುಗಳ ಪೈಕಿ 65 ಸಕ್ಕರೆ ಕಾರ್ಖಾನೆಗಳು ಕಾರ್ಯನಿರತವಾಗಿವೆ. ವಲಯವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.
<table>
<tr><th>ಕ್ರ.ಸಂ.</th><th>ವಲಯ</th><th>ಕಾರ್ಯನಿರತ</th><th>ಸ್ಥಗಿತ</th><th>ಸಮಾಪನೆ</th><th>ಒಟ್ಟು</th></tr>
<tr><td>1</td><td>ಸಾರ್ವಜನಿಕ ವಲಯ</td><td>–</td><td>02</td><td>–</td><td>02</td></tr>
<tr><td>2</td><td>ಜಂಟಿ ವಲಯ</td><td>–</td><td>–</td><td>01</td><td>01</td></tr>
<tr><td>3</td><td>ಸಹಕಾರಿ ವಲಯ</td><td>13</td><td>05</td><td>04</td><td>22</td></tr>
<tr><td>4</td><td>ಸಹಕಾರಿ ವಲಯ (ಗುತ್ತಿಗೆ)</td><td>08</td><td>–</td><td>–</td><td>08</td></tr>
<tr><td>5</td><td>ಖಾಸಗಿ ವಲಯ</td><td>44</td><td>11</td><td>–</td><td>55</td></tr>
<tr><td colspan="2">ಒಟ್ಟು</td><td>65</td><td>18</td><td>05</td><td>88</td></tr>
</table>
ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 65 ಸಕ್ಕರೆ ಕಾರ್ಖಾನೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>(ಆ)</td><td>ಇವುಗಳ ಪೈಕಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಎಷ್ಟು; ಅವು ಯಾವುವು; (ಜಿಲ್ಲಾವಾರು ಕಾರ್ಖಾನೆಗಳ ಹೆಸರಿನೊಂದಿಗೆ ವಿವರ ನೀಡುವುದು)</td></tr>
<tr><td>(ಇ)</td><td>ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಕಾರ್ಯನಿರ್ವಹಿಸುತ್ತಿರು ಕಾರ್ಮಿಕರಿಗೆ ವೇತನವವನ್ನು ವೇತನವನ್ನು ಸರ್ಕಾರದಿಂದ ನಿಗದಿಪಡಿಸಲಾಗಿದೆಯೇ;</td><td>ಸರ್ಕಾರದ ಆದೇಶ ಸಂಖ್ಯೆ:ಎಲ್‌ಡಿ/85/ಎಲ್‌ಡಬ್ಲ್ಯೂಎ/2014, ದಿನಾಂಕ:18.03.2016 ರನ್ವಯ ರಾಜ್ಯದ ಎಲ್ಲಾ ಸಕ್ಕರೆ ಉದ್ದಿಮೆಗಳಿಗೆ ಅನ್ವಯಿಸುವಂತೆ ತ್ರಿಪಕ್ಷೀಯ ವೇತನ ಸಮಿತಿ ಶಿಫಾರಸ್ಸುಗಳನ್ವಯ ಸಕ್ಕರೆ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ವೇತನ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.</td></tr>
<tr><td>(ಈ)</td><td>ಹಾಗಿದ್ದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ನಿಗದಿತ ವೇತನ ಪಾವತಿ ಮಾಡದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
</table>

......2

(ಉ) ಬಂದಿದ್ದಲ್ಲಿ, ಕಾರ್ಮಿಕರಿಗೆ ನಿಗದಿತ ವೇತನ ಪಾವತಿಸದೇ ಸರ್ಕಾರದ ಆದೇಶವನ್ನು ಉಲ್ಲಂಘಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಯಾವುವು; ಈ ಕಾರ್ಖಾನೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)

ತ್ರಿಪಕ್ಷೀಯ ವೇತನ ಸಮಿತಿಯ ಶಿಫಾರಸ್ಸುಗಳನ್ವಯ ವೇತನ ಪಾವತಿ ಮಾಡದಿರುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 33 ಸಿ(1) ರಡಿ ವಸೂಲಾತಿಗಾಗಿ ಕಾರ್ಮಿಕರು ಸಕ್ಷಮ ಪ್ರಾಧಿಕಾರಗಳ ಮುಂದೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಅಂತಹ ಪ್ರಕರಣಗಳಲ್ಲಿ ಕಾರ್ಮಿಕ ಇಲಾಖೆಯ ಸಕ್ಷಮ ಪ್ರಾಧಿಕಾರಗಳು ತೆಗೆದುಕೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿವೆ.

1. ಮೆ: ರೇಣುಕಾ ಶುಗರ್ಸ್ ಲಿ. ರಾಯಬಾಗ ಸಂಸ್ಥೆಯ ಕಾರ್ಮಿಕ ಸಂಘದವರು ಕೈಗಾರಿಕಾ ವಿವಾದ ಕಾಯ್ದೆ 1947 ರ ಕಲಂ 33 ಸಿ(1) ರಡಿ ವಸೂಲಾತಿಗಾಗಿ ಕೋರಿದ್ದು, ಈಗಾಗಲೇ ದಿನಾಂಕ 21/03/2021 ರಂದು ರೂ.2,94,89,192.41 ಹಿಂಬಾಕಿ ವೇತನವನ್ನು ವಸೂಲು ಮಾಡಿ ಕೊಡುವಂತೆ ಮಾನ್ಯ ಜಿಲ್ಲಾಧಿಕಾರಿ ಬೆಳಗಾವಿ ಇವರಿಗೆ ಕಳುಹಿಸಲಾಗಿದೆ. ಸದರಿ ಆದೇಶದ ವಿರುದ್ಧ ಆಡಳಿತ ವರ್ಗದವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 146971/2020 ಅನ್ನು ದಾಖಲಿಸಿದ್ದು ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.
2. ಮೆ:ಶಿರಗುಪ್ಪಿ ಶುಗರ್ಸ್, ಕಾಗವಾಡ ಸಂಸ್ಥೆಗೆ ಸಂಬಂಧಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 115475/2019ರಲ್ಲಿ ತಡೆಯಾಜ್ಞೆ ನೀಡಿರುತ್ತದೆ.
3. ಮೆ:ಜಿ.ಎಂ.ಶುಗರ್ಸ್ ಸಂಗೂರ್ ಸಂಸ್ಥೆಗೆ ಸಂಬಂಧಪಟ್ಟಂತೆ ಕಾರ್ಮಿಕ ಸಂಘದವರು ವಸೂಲಾತಿಗಾಗಿ ಸಲ್ಲಿಸಿದ ಅರ್ಜಿಯ ಮೇಲೆ ವಿಚಾರಣೆ ನಡೆಸಿ ರೂ.78,01,202.00 ಮೊತ್ತದ ವಸೂಲಾತಿಗಾಗಿ ಹಾವೇರಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ.

ಅಲ್ಲದೆ, ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆವತಿಯಿಂದ ಕಾರ್ಖಾನೆಗಳ ಕಾಯ್ದೆ, 1948 ರಡಿಯಲ್ಲಿ ನೋಂದಾವಣಿಯಾಗಿರುವ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳಲ್ಲಿ ವೇತನ ಸಂದಾಯ ಕಾಯ್ದೆ, 1936 ರಡಿಯಲ್ಲಿ ವೇತನ ಪಾವತಿ ಸಂಬಂಧದ ಉಲ್ಲಂಘನೆಗಳನ್ನು ಗುರುತಿಸಿ ನಿಯಮಾನುಸಾರ ಕ್ರಮವಹಿಸಲಾಗಿದೆ.

ಕ್ರ. ಸಂ.	ಕಾರ್ಖಾನೆಯ ಹೆಸರು	ಉಪ ಕಾರ್ಮಿಕ ಆಯುಕ್ತರ ಪ್ರಾಧಿಕಾರದ ಮುಂದೆ ಸಲ್ಲಿಸಿರುವ ಕ್ಲೇಮ್ ಅರ್ಜಿ ದಿನಾಂಕ
1	ಮೆ॥ ಮೈಸೂರು ಸಕ್ಕರೆ ಕಂಪನಿ ನಿ., ಮಂಡ್ಯ	04.02.2019
2	ಮೆ॥ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ	19.03.2020
3	ಮೆ॥ ಮಲಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ	06.06.2020
4	ಮೆ॥ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೆಳಗಾವಿ	16.04.2020
5	ಮೆ॥ ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ವಿಜಯಪುರ	22.07.2020
6	ಮೆ॥ ಧ್ಯಾನಯೋಗಿ ಶ್ರೀ ಶಿವಕುಮಾರ ಸ್ವಾಮೀಜಿ ಶುಗರ್ಸ್ ಲಿ., ವಿಜಯಪುರ	18.06.2021

ಸಿಐ 346 ಸಿಓಎಫ್ 2021

(ಶಂಕರ ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 244ಕ್ಕೆ ಅನುಬಂಧ

ರಾಜ್ಯದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳ ಜಿಲ್ಲಾವಾರು ವಿವರ

ಕ್ರ.ಸಂ	ಸಕ್ಕರೆ ಕಾರ್ಖಾನೆಗಳು
	ಬೆಳಗಾವಿ ಜಿಲ್ಲೆ
1	ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಚಿಕ್ಕೋಡಿ ತಾಲ್ಲೂಕು
2	ಘಟಪ್ರಭಾ ಸಸಕಾನಿ, ಗೋಕಾಕ್
3	ಹಾಲಸಿದ್ದನಾಥ ಸಸಕಾನಿ., ನಿಪ್ಪಾಣಿ
4	ಹಿರಣ್ಯಕೇಶಿ ಸಸಕಾನಿ., ಸಂಕೇಶ್ವರ
5	ಕೃಷ್ಣಾ ಸಸಕಾನಿ, ಅಥಣಿ
6	ಮಲಪ್ರಭಾ ಸಸಕಾನಿ, ಎಂ.ಕೆ. ಹುಬ್ಬಳ್ಳಿ
7	ಭಾಗ್ಯಲಕ್ಷ್ಮಿ ಸಸಕಾನಿ (ಗುತ್ತಿಗೆದಾರರು– ಲೈಲಾ ಶುಗರ್ಸ್), ಖಾನಾಪುರ
8	ರಾಯಬಾಗ್ ಸಸಕಾನಿ (ಗುತ್ತಿಗೆದಾರರು –ರೇಣುಕಾ ಶುಗರ್ಸ್), ರಾಯಬಾಗ್
9	ಧನಲಕ್ಷ್ಮಿ ಸಸಕಾನಿ (ಗುತ್ತಿಗೆದಾರರು–ಪ್ಯಾರೀಸ್ ಶುಗರ್ ಇಂಡಸ್ಟ್ರೀಸ್), ರಾಮದುರ್ಗ
10	ಸೋಮೇಶ್ವರ ಸಸಕಾನಿ, ಸಿದ್ದಸಮುದ್ರ, ಬೈಲಹೊಂಗಲ ತಾಲ್ಲೂಕು
11	ಸತೀಶ್ ಶುಗರ್ಸ್ ಲಿ., ಹುಣಶ್ಯಾಳ
12	ಉಗಾರ ಶುಗರ್ಸ್ ಲಿ., ಉಗಾರ ಖುರ್ದು, ಅಥಣಿ ತಾಲ್ಲೂಕು
13	ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಬೇಡಕಿಹಾಳ್, ಚಿಕ್ಕೋಡಿ ತಾಲ್ಲೂಕು
14	ಅಥಣಿ ಫಾರ್ಮರ್ಸ್ ಶುಗರ್ ವರ್ಕ್ಸ್ ಲಿ., ವಿಷ್ಣು ಅಣ್ಣಾನಗರ
15	ರೇಣುಕಾ ಶುಗರ್ಸ್, ಮನೋಳಿ
16	ರೇಣುಕಾ ಶುಗರ್ಸ್, ಬುರ್ಲಟ್ಟಿ
17	ವಿಶ್ವರಾಜ್ ಶುಗರ್ಸ್ ಇಂಡಸ್ಟ್ರೀಸ್ ಲಿ., ಹುಕ್ಕೇರಿ
18	ಗೋಕಾಕ ಶುಗರ್ಸ್ ಲಿ., ಕೊಳವಿ, ಗೋಕಾಕ ತಾಲ್ಲೂಕು
19	ಶಿವಶಕ್ತಿ ಶುಗರ್ಸ್ ಲಿ., ಸೌದತ್ತಿ
20	ಶಿರಗುಪ್ಪಿ ಶುಗರ್ ವರ್ಕ್ಸ್ ಲಿ, ಕಾಗವಾಡ
21	ಅರಿಹಂತ ಶುಗರ್ಸ್ ಲಿ., ಜೈನಾಪೂರ, ಚಿಕ್ಕೋಡಿ ತಾಲ್ಲೂಕು
22	ಬೆಳಗಾಂ ಶುಗರ್ಸ್ ಲಿ., ಹುದಲಿ, ಬೆಳಗಾವಿ ತಾಲ್ಲೂಕು
23	ಹರ್ಷ ಶುಗರ್ಸ ಲಿ., ಕರಿಕಟ್ಟಿ, ಸವದತ್ತಿ ತಾಲ್ಲೂಕು
24	ಮಾರ್ಕಂಡೇಯ ಸಸಕಾನಿ., ಕಾಕತಿ, ಬೆಳಗಾವಿ ತಾಲ್ಲೂಕು
25	ಸಂಗಮ ಶುಗರ್ಸ ಲಿ., ಹಿಡಕಲ್ ಡ್ಯಾಂ, ಹುಕ್ಕೇರಿ ತಾಲ್ಲೂಕು
	ಬಾಲಕೋಟ ಜಿಲ್ಲೆ
26	ಜೆಮ್ ಶುಗರ್ಸ್ ಲಿ., ಕುಂದರಗಿ
27	ಗೋದಾವರಿ ಶುಗರ್ಸ್ ಲಿ., ಮುಧೋಳ್ ತಾಲ್ಲೂಕು
28	ಜಮಖಂಡಿ ಶುಗರ್ಸ್ ಲಿ., ಹಿರೇಪಡಸಲಗಿ
29	ಪ್ರಭುಲಿಂಗೇಶ್ವರ ಶುಗರ್ಸ್ ಲಿ., ಸಿದ್ದಾಪುರ
30	ಬೀಳಗಿ ಶುಗರ್ಸ್ ಲಿ., ಬಡಗಂಡಿ
31	ನಿರಾಣಿ ಶುಗರ್ಸ್ ಲಿ, ಮುಧೋಳ್
32	ಇಐಡಿ ಪ್ಯಾರಿ (ಇಂಡಿಯಾ) ಲಿ., ನಾಗರಾಳ, ಬಾಗಲಕೋಟೆ ತಾಲ್ಲೂಕು
33	ಇಂಡಿಯನ್ ಕೇನ್ ಪವರ ಲಿ., ಉತ್ತೂರು, ಮುಧೋಳ ತಾಲ್ಲೂಕು
34	ಶ್ರೀ. ಸಾಯಿಪ್ರಿಯಾ ಶುಗರ್ಸ್ ಲಿ., ಹಿಪ್ಪರಗಿ, ಜಮಖಂಡಿ ತಾಲ್ಲೂಕು
35	ಎಂ.ಆರ್.ಎನ್. ಕೇನ್ ಪಾವರ ಲಿ., ಕಲ್ಲಾಪುರ
	ವಿಜಯಪುರ ಜಿಲ್ಲೆ
36	ನಂದಿ ಸಸಕಾನಿ., ಕೃಷ್ಣಾನಗರ
37	ಇಂಡಿಯನ್ ಶುಗರ್ ಮ್ಯಾನುಫ್ಯಾಕ್ಚರಿಂಗ್ ಲಿ., ಹಾವಿನಾಳ
38	ಕೆ.ಪಿ.ಆರ್. ಶುಗರ್ಸ್ ಲಿ., ಆಲಮೇಲ್, ಸಿಂದಗಿ ತಾಲ್ಲೂಕು
39	ಮನಾಲಿ ಶುಗರ್ಸ್ ಲಿ., ಮಲ್ಘಾನ, ಸಿಂದಗಿ ತಾಲ್ಲೂಕು
40	ಜಮಖಂಡಿ ಶುಗರ್ಸ್ ಲಿ., ನಾದ್ ಕೆ.ಡಿ.
41	ಶ್ರೀ. ಬಸವೇಶ್ವರ ಶುಗರ್ಸ ಲಿ., ಕಾರಜೋಳ

ಕ್ರ.ಸಂ	ಸಕ್ಕರೆ ಕಾರ್ಖಾನೆಗಳು
42	ಬಾಲಾಜಿ ಶುಗರ್ಸ್ & ಕೆಮಿಕಲ್ಸ್ ಲಿ., ಯರಗಲ್
43	ಭೀಮಾಶಂಕರ ಸಸಕಾ ನಿ., ಮರಗೂರು, ಇಂಡಿ ತಾಲ್ಲೂಕು
	ಗದಗ ಜಿಲ್ಲೆ
44	ವಿಜಯನಗರ ಶುಗರ್ಸ ಪ್ರೈ ಲಿ., ಗಂಗಾಪುರ, ಮುಂಡರಗಿ ತಾಲ್ಲೂಕು
	ಹಾವೇರಿ ಜಿಲ್ಲೆ
45	ಜಿ.ಎಂ. ಶುಗರ್ಸ & ಎನರ್ಜಿ ಲಿ., ಸಂಗೂರು
	ಉತ್ತರ ಕನ್ನಡ ಜಿಲ್ಲೆ
46	ಇಐಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ, ಹಳಿಯಾಳ ತಾಲ್ಲೂಕು
	ಬಳ್ಳಾರಿ ಜಿಲ್ಲೆ
47	ಎನ್.ಎಸ್.ಎಲ್. ಶುಗರ್ಸ್ (ತುಂಗಭದ್ರ) ಲಿ., ದೇಶನೂರು
48	ಮೈಲಾರ ಶುಗರ್ಸ ಲಿ., ಬಿರಬ್ಬಿ, ಹೂವಿನಹಡಗಲಿ ತಾಲ್ಲೂಕು
49	ಶ್ಯಾಮನೂರು ಶುಗರ್ಸ್, ದುಗ್ಗಾವತಿ
	ಬೀದರ ಜಿಲ್ಲೆ
50	ಮಹಾತ್ಮಗಾಂಧಿ ಸಸಕಾನಿ., ಭಾಲ್ಕಿ
51	ನಾರಂಜಾ ಸಸಕಾನಿ., ಇಮಾಂಪುರ
52	ಭಾಲ್ಕೇಶ್ವರ ಶುಗರ್ಸ್ ಲಿ., ಬಾಜೋಳಗಾ, ಭಾಲ್ಕಿ ತಾಲ್ಲೂಕು
53	ಬೀದರ ಕಿಸಾನ ಸಕ್ಕರೆ ಕಾರ್ಖಾನೆ ಲಿ., ಮೊಗದಾಳ
	ಕಲಬುರಗಿ ಜಿಲ್ಲೆ
54	ಸಹಕಾರಿ ಸಕ್ಕರೆ ಕಾರ್ಖಾನೆ ನಿ. (ಗುತ್ತಿಗೆದಾರರು – ಎನ್ಎಸ್ಎಲ್ ಶುಗರ್ಸ್), ಆಳಂದ ತಾಲ್ಲೂಕು
55	ಶ್ರೀ. ರೇಣುಕಾ ಶುಗರ್ಸ್ ಲಿ., ಹಾವಳಗಾ, ಅಫಜಲಪುರ ತಾಲ್ಲೂಕು
56	ಉಗಾರ ಶುಗರ ವರ್ಕ್ಸ್ ಲಿ., ಮಳ್ಳಿ, ಜೇವರ್ಗಿ ತಾಲ್ಲೂಕು
	ಯಾದಗಿರಿ ಜಿಲ್ಲೆ
57	ಕೋರಗ್ರೀನ್ ಶುಗರ್ಸ್ ಲಿ., ತುಮಕೂರ, ಶಹಾಪುರ ತಾಲ್ಲೂಕು
	ಚಾಮರಾಜನಗರ ಜಿಲ್ಲೆ
58	ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಕುಂತೂರು
	ಹಾಸನ ಜಿಲ್ಲೆ
59	ಹೇಮಾವತಿ (ಗುತ್ತಿಗೆದಾರರು–ಚಾಮುಂಡೇಶ್ವರಿ ಶುಗರ್ಸ್), ಸಸಕಾನಿ, ಶ್ರೀನಿವಾಸಪುರ
	ಮಂಡ್ಯ ಜಿಲ್ಲೆ
60	ಪಾಂಡವಪುರ ಸಸಕಾನಿ, (ಗುತ್ತಿಗೆದಾರರು ಎಂ.ಆರ್.ಎನ್.ಕೇನ್ ಪಾವರ), ಪಾಂಡವಪುರ
61	ಚಾಮುಂಡೇಶ್ವರಿ ಶುಗರ್ಸ್ ಲಿ, ಭಾರತಿ ನಗರ
62	ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ (ಐಸಿಎಲ್)
63	ಎನ್ಎಸ್ಎಲ್ (ಎಸ್ಸಿಎಂ) ಶುಗರ್ಸ್, ಕೊಪ್ಪ
	ಮೈಸೂರು ಜಿಲ್ಲೆ
64	ಬನ್ನಾರಿ ಅಮ್ಮನ್ ಶುಗರ್ಸ್ ಲಿ, ಅಲಗಂಚಿ
	ದಾವಣಗೆರೆ ಜಿಲ್ಲೆ
65	ದಾವಣಗೆರೆ ಶುಗರ್ಸ್ ಲಿ., ಕುಕ್ಕವಾಡ

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು